ಬೇಕಲ್ಲ ಎಂದು ಗಾಡಿ ಒರಗಿಸಿ ಒಳಹೋದ. ಅಡ್ಡೆ ಪಟ್ಟೆಯಲ್ಲಿ ಸುತ್ತಿದ್ದ ಮಾಂಸದ ಪೊಟ್ಟಣವನ್ನ ಇಸಿದುಕೊಂಡ ತಿಮ್ಮ, ಶಂಕ್ರಿಯನ್ನುದ್ದೇಶಿಸಿ, 'ಲೆ ಇವ್ಳೆ ಟಿ ಇಕ್ಕೆ' ಎಂದ. ಒಳಗಿಂದ ಸಲೀಸು ಪ್ರತಿಕ್ರಿಯೆ ಸಿಕ್ಕಂತೆ ಕಾಣಲಿಲ್ಲ. ಮಲ್ಲಿಯೇ ಮುಂದುವರೆದು, 'ಹೆ ಬ್ಯಾಡ ತಿಮ್ಮಯ್ಯ, ಈಗಿನ್ನ ಟಿ ಕುಡ್ದು ಬಂದೆ' ಎಂದುದು ತಿಮ್ಮನಿಗೆ ಎಷ್ಟೋ ಸಮಾಧಾನ ಕೊಟ್ಟಿತು. 'ಹೆ ಒಂಚೂರು ಕುಡಿಯುವಂತೆ' ಎಂದು ಮಾತಿಗೆ ಅಂದನಾದರೂ... ಮನಸ್ಸು ಅವನನ್ನು ಬೀಳ್ಕೊಡುವುದರತ್ತಲೇ ಹಾತೊರೆಯುತ್ತಿತ್ತು. ಮಲ್ಲಿ ಹೊಸಿಲು ದಾಟುವ ಮುನ್ನ, 'ಸಲಗನ, ಹೆಣ್ಣ?' ಕೇಳಿದ. 'ಒಳ್ಳೆ ಹೆಣ್ಣಂದಿನೆ ಸಿಕ್ಕೈತೆ ತಗ, ಯಾವಗ್ಲು ಕೇಳಿವೆ ಸಿಕ್ತ ಸಿಕ್ತ ಅಂತವ.' ಈ ಮಾತು ಆಚೀಚೆ ಇರುವವರಿಗೆ ಕೇಳಿಲ್ಲ ಎಂಬುದನ್ನ ಖಾತ್ರಿ ಮಾಡಿಕೊಂಡ ತಿಮ್ಮ ಟಿವಿಎಸ್‌ನ ಕುಟು ಕುಟು ಹೊಗೆಯೊಂದಿಗೆ ಮಲ್ಲಿಯನ್ನು ಬೀಳ್ಕೊಟ್ಟು ಸಮಾಧಾನಿಸಿಕೊಂಡ.

ಇನ್ನ ಮನೆಯೊಳಗೆ ನುಗ್ಗಿ ಬಂದ ತಿಮ್ಮ, 'ನಿಮ್ಮವ್ವನ್ ಬೋಸುಡಿನಾಕ್ಯಾಯ, ಎಷ್ಟೆ ಜಂಬ ನಿನ್ಗೆ, ಬಂದರ್ಗೆ ಒಂದು ಲೋಟ ಟಿ ಇಕ್ಕೊಡಕಾಗಲ್ಲ' ಎಂದು ಕಿರುಚಬೇಕೆಂದುಕೊಂಡನಾದರೂ... ಅವಳು ಕೂರಗೆ ಕೂತು ಬೆಳ್ಳುಳ್ಳಿ ಸುಳಿಯುತ್ತಿರುವುದನ್ನ ಕಂಡು ಈಗ ಏನಾರ ಅಂದು ಮತ್ತೆ ರಂಪ ಮಾಡ್ಕಣದು ಬ್ಯಾಡ ಎಂಬ ತೀರ್ಮಾನಕ್ಕೆ ಬಂದು ಕೋಪವನ್ನು ತಹಬದಿಗೆ ತಂದುಕೊಂಡ.

ಮಾಂಸದ ಪೊಟ್ಟಣವನ್ನ ಬಿಚ್ಚಿ ಸರಿ ಸುಮಾರು ಎರಡು ಕೇಜಿಯೊಷ್ಟಿದ್ದ ಮಾಂಸವನ್ನ ಕಣ್ತುಂಬಿಕೊಂಡು ಅದನ್ನ ತೊಳೆದು ತುಂಡಾಕಿಕೊಡಲು ಶಂಕ್ರಿ ಪಕ್ಕವೇ ಕುಡ್ಲು ಮಸ್ಕಂಡು ಕೂತ.

ಒಂದೆರೆಡು ಉದ್ದನೆಯ ಬಾರು ಬೆರ್ಸೆ ಇದ್ದ ಕಡಿ ಮಾಂಸವನ್ನ ಸಣ್ಣಗೆ ತುಂಡಾಕಿದ್ದ. ಹೊರಗಡೆಯಿಂದ ಜೋರಾದ ಗುಂಪು ಶಬ್ದ ಮೆಲ್ಲಗೆ ಒಳ ನುಸುಳತೊಡಗಿತು. ಮೊದ ಮೊದಲು ಉಪೇಕ್ಷಿಸಿ ಇಬ್ಬರೂ ತಮ್ಮ ಕಾಯಕ ಮುಂದುವರೆಸಿದರಾರೂ... ಕ್ರಮೇಣ ಆಚೆಯ ದನಿ ಇನ್ನೂ ಜೋರಾದಂತೆ ಕೇಳಿಸಿತು. ಯಾರೋ ಅಳುತ್ತಿರುವಂತೆ, ಕಿರುಚುತ್ತಿರುವಂತೆ, ಬಾಯಿ ಬಡಿದುಕೊಳ್ಳುತ್ತಿರುವಂತೆ ಆ ಧ್ವನಿ ರೂಪಾಂತರಗೊಳ್ಳತೊಡಗಿತು! ತಿಮ್ಮ ಶಂಕ್ರಿಗೆ ಇನ್ನು ಒಳಗಿರಲು ಸಾಧ್ಯವಾಗಲಿಲ್ಲ. ತಿಮ್ಮ, 'ಅದೇನ್ ನೋಡೋಗೆ' ಎನ್ನುವುದಕ್ಕು ಮುನ್ನವೇ ಶಂಕ್ರಿ ಓಡೋಗಿ ಹಾಕಿದ್ದ ಬಾಗ್ಲು ತೆಗೆದು ತಾನೂ ಆ ಗುಂಪಿನ ಪಾಲಾದಳು. ಈಗ ಒಳಗಿದ್ದ ತಿಮ್ಮನಿಗೆ ತನ್ನ ಹೆಂಡ್ರು ಶಂಕ್ರಿಯೂ ಬಾಯಿ ಬಡಿದುಕೊಳ್ಳುತ್ತಿರುವುದು ಕೇಳಿಸತೊಡಗಿತು. ಬಾಗಿಲು ಹಾರೊಡೆದಿರುವುದರಿಂದ ಈಗ ಸ್ಪಷ್ಟವಾಗಿ ಅಳು, ಗೋಳಾಟ, ಚೀರಾಟ ಕೇಳಿಸತೊಡಗಿ ತಿಮ್ಮ ಆಚೆ ಏನಾಗಿರಬಹುದೆಂಬುದನ್ನು ಕೂತಲ್ಲೆ ಊಹಿಸಲು ಸಾಧ್ಯವಾಯಿತು.

ತಿಮ್ಮ ತಾನು ತುಂಡಾಕುತ್ತಿದ್ದ ಮಾಂಸ ಮತ್ತು ಸಲಕರಣೆಗಳನ್ನು ಎತ್ತಿಕ್ಕುತ್ತಲೇ... ಕಳೆದ ಎರಡು ತಿಂಗಳಿಂದ ಹಾಸಿಗೆ ಹಿಡಿದಿದ್ದ ತನ್ನ ದೊಡ್ಡಪ್ಪ ಇಂದು ಇಲ್ಲವಾಗಿರಬಹುದೆಂಬುದನ್ನ ಊಹಿಸಿದ. ದೊಡ್ಡಪ್ಪನೆಂದರೆ ಅಪ್ಪನ ಅಣ್ಣ, ಅಜ್ಜನ ಹಿರೆಮಗ. ಅಜ್ಜ ತೀರೋದ ಅನಂತರ ತಿಮ್ಮನ ಅಪ್ಪ ಕೆಂಜನನ್ನು ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡಿದ್ದು ಇದೇ ಕರಿದೊಡಪ್ಪ. ಈಗ ತಿಮ್ಮನಿರುವ ಮನೆಯ ಒತ್ತುಗೋಡೆಯ ಆ ಕಡೆ ದಿಕ್ಕಿಗಿರುವ ಮನೆಯೇ ಕರಿದೊಡಪ್ಪನ ಮೋಟ್ಗೋಡೆ ಮನೆ. ಅಜ್ಜನ ಕಾಲದಲ್ಲಿ ಒಂದೆ ಆಗಿದ್ದ ಮನೆಗೆ ಮಕ್ಕಳು ಭಾಗ್ವಾದಾಗ ಮಧ್ಯುಕ್ಕೊಂದು ಗೋಡೆ ಇಕ್ಕಿ, ಆ ಕಡೆದು ಕೆಂಜನಿಗೆ ಈ ಕಡೆದು ಕರಿಯನಿಗೆ ಎಂದು ಬಿಟ್ಟುಕೊಟ್ಟಿದ್ದರು. ಅದರಂತೆ ತಿಮ್ಮ ಮತ್ತು ಶಂಕ್ರಿ ಸಂಸಾರ ಕೆಂಜನ ಪಾಲಿನಲ್ಲಿ, ದೊಡ್ಡಪ್ಪನ ಮಕ್ಕಳ ಸಂಸಾರ ಕರಿಯನ ಪಾಲಿನಲ್ಲಿ ನಡೆಯುತ್ತಿತ್ತು.

ಅದೇನು ನೋಡೋಣ ಎಂದು ದಿಗಿಲುಬಿದ್ದ ತಿಮ್ಮ ಅದ್ನೆಲ್ಲ ಎತ್ತಿ, ಮೂಲೆಗೆ ತುರ್ಕಿ ಆಚಿಕೆ ಓಡಿಬಂದ. ಅದಾಗಲೆ ಜನ ಗುಂಪು ಕಟ್ಟಿ ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದರು. ಮನೆಯೊಳಗಿಂದ ಅವಸರದಿ ಬಂದ ತಿಮ್ಮನನ್ನು ನೋಡಿದ್ದೆ ಗುಂಪು ಅವನಿಗೆ ತನ್ನಲ್ಲಿ ಅವಕಾಶ ಕೊಟ್ಟಿತು. ಅಲ್ಲಿ